# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೌಶಲಕರ್ ಡಾಟ್ ಕಾಮ್‌ನಲ್ಲಿ ನೊಂದಾಯಿಸಿದ ಯುವಕರಿಗಾಗಿ ಸಮಾಲೋಚನೆ ಮತ್ತು ಉದ್ಯೋಗ ನಿಯುಕ್ತಿಯೊಂದಿಗೆ ಜೋಡಣೆ ಮಾಡುವುದು.

**ಓದಲಾಗಿದೆ:**
1. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತಇ/ತ/ಕೌಶಲ್ಯ/ವಿವ–19/2017–18 ದಿ: 01/07/2017.
2. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರುಗಳ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 29/06/2017.
3. ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 774 ವೆಚ್ಚ–12/2017 ದಿ: 14/07/2017.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮೆ. ಮೈಂಡ್ ಟ್ರಿ ಹಾಗೂ ಮೆ. ಯುಎನ್‌ಡಿಪಿ ರವರ ಜಂಟಿ ಪ್ರಸ್ತಾವನೆಯನ್ನು ದಿ: 29/06/2017 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ ಪ್ರಸ್ತಾವನೆಯಲ್ಲಿ ಕೆಲವು ವಿವರಗಳನ್ನು ಸೇರಿಸಿ ಪುನರ್ ಸಲ್ಲಿಸಲು ತಿಳಿಸಲಾಗಿದ್ದು, ಅದರಂತೆ ಸದರಿ ಸಂಸ್ಥೆಯವರು ದಿ: 30/06/2017 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕರ್ನಾಟಕ ರಾಜ್ಯವು 6.25 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ಶೇಕಡ 55 ರಷ್ಟು (3.44 ಕೋಟಿ) ಯುವಕರು 16 ರಿಂದ 35 ವರ್ಷದ ವಯೋಮಿತಿ ಹೊಂದಿರುವರು. ಈ ಜನಸಂಖ್ಯೆಯ ಪ್ರಯೋಜನವು ಮುಂದಿನ 25 ವರ್ಷಗಳಲ್ಲಿ ಒಂದು ಅಭಿವೃದ್ಧಿ ಅಂಚನ್ನು ಮತ್ತು ಜಾಗತಿಕ ನಾಯಕನಾಗಿ ಹತೋಟಿಗೆ ತರುವ ಸಾಮರ್ಥ್ಯವನ್ನು ನೀಡುವ ಮೂಲಕ ನಮಗೆ ಅವಕಾಶದ ಕಿಟಕಿಯೊಂದನ್ನು ಒದಗಿಸುತ್ತದೆ. ಆದರೆ, ಈ ದೊಡ್ಡ ಯುವ ಜನಸಂಖ್ಯೆಯನ್ನು ಕೌಶಲ್ಯ ತರಬೇತಿಯತ್ತ ಸಾಗಿಸಿ ಸಿದ್ಧಪಡಿಸದೆ ಈ ಕಾರ್ಯವು ಸಾಧ್ಯವಾಗಲು ಕಷ್ಟವಾಗುತ್ತದೆ. ಕರ್ನಾಟಕ ಸರ್ಕಾರವು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಯುವಜನತೆಗೆ ಅವಶ್ಯಕವಿರುವ ಕೌಶಲ್ಯ ಹಾಗೂ ಪರಿಣಿತಿ ಹೊಂದುವುದರ ಮೂಲಕ ಉದ್ಯೋಗಶೀಲತೆಯನ್ನು ಹೆಚ್ಚಿಸಲು ಸರ್ಕಾರಿ ಆದೇಶದ ಸಂಖ್ಯೆ: ಸಿಆಸುಇ 164 ಸಿಆಸೇ 2016, ದಿನಾಂಕ: 24.09.2016ರನ್ವಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಿದೆ. ರಾಜ್ಯದ ಎಲ್ಲಾ ಕೌಶಲ್ಯ ಅಭಿವೃದ್ಧಿ ಉಪಕ್ರಮಗಳ ನಿಯಂತ್ರಣ, ಪ್ರಮಾಣೀಕರಣ, ಪ್ರೋತ್ಸಾಹ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಕಾರ್ಯಗಳನ್ನು ಕೈಗೊಳ್ಳುವುದು ಇದರ ಗುರಿಯಾಗಿದೆ. ಉತ್ತಮ ಜೀವನೋಪಾಯಕ್ಕಾಗಿ ಸಮಾಜದ ಪ್ರತಿ ವರ್ಗಕ್ಕೆ ಕೌಶಲ್ಯ ತರಬೇತಿ ಮತ್ತು ಬಲವರ್ಧನೆಯನ್ನು ಒದಗಿಸಲು ಇಲಾಖೆ ರಚಿಸಲ್ಪಟ್ಟಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಮೈಂಟ್‌ಟ್ರೀ, ಐಟಿ ಕಂಪನಿಯಿಂದ ಕೌಶಲ್ಯ ಅಂತರವನ್ನು ನಿರ್ಧರಿಸಲು, ಕೌಶಲೀಕರಣ ಮತ್ತು ಉದ್ಯೋಗ ಒದಗಿಸಲು ಸಾಂಸ್ಥಿಕ ಸಾಮಾಜಿಕ ಜವಬ್ದಾರಿಯಡಿ "I Got Skills", ಎಂಬ ಏಕೈಕ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸಲಾಗಿದೆ. ಇದು ಬಹು–ಆಯಾಮದ ವೇದಿಕೆಯಾಗಿದ್ದು, ಅನೇಕ ಪಾಲುದಾರರ ಪರಸ್ಪರ ಕ್ರಿಯೆಗಳನ್ನು ಸಕ್ರಿಯಗೊಳಿಸುತ್ತದೆ. ಈ ವೇದಿಕೆಯು ಪೂರ್ವ ಕಲಿಕೆಯ ಗುರುತಿಸುವಿಕೆ, ತರಬೇತಿ, ದೃಢೀಕರಣ, ಕೌಶಲ್ಯ ದಾಖಲಾತಿ ಪುಸ್ತಕಗಳು, ಉದ್ಯೋಗ ನಿಯುಕ್ತಿ ಅಂತರ–ಸಾಮರ್ಥ್ಯ ವಿಶ್ಲೇಷಣೆ ಮತ್ತು ಆಸಕ್ತಿ ಆಧಾರಿತ ಕಲಿಕೆ ಇತ್ಯಾದಿ ಪ್ರಮುಖ ಕಾರ್ಯಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುತ್ತದೆ.

ಮೈಂಡ್‌ಟ್ರೀ, ಸಂಸ್ಥೆಯು, UNDP India ಸಹಯೋಗದೊಂದಿಗೆ ಮಧ್ಯಸ್ಥಿಕೆ ವಹಿಸಿ ಈ ಕೆಳಕಂಡ ವಿಷಯಗಳೊನ್ನೊಳಗೊಂಡ ಅಂಶಗಳನ್ನು ರಚಿಸಿ ಪ್ರಸ್ತಾಪಿಸಿರುತ್ತದೆ.

ಎ) **ಅಭ್ಯರ್ಥಿಗಳೊಂದಿಗೆ ಸಮಾಲೋಚನೆ ಮತ್ತು ವೈಯಕ್ತಿಕ ಒಡಂಬಡಿಕೆ**

**ದೂರವಾಣಿ ಸಮಾಲೋಚನೆ:**

ನೊಂದಣಿಯಾದ ಎಲ್ಲಾ ಅಭ್ಯರ್ಥಿಗಳೊಂದಿಗೆ ರಚಿಸಲಾದ ಪ್ರಶ್ನಾವಳಿಯನ್ವಯ ದೂರವಾಣಿ ಮೂಲಕ ಸಮಾಲೋಚನೆ ನಡೆಸಿ ಹಾಗೂ ಮುಖಾ ಮುಖಿಯಾಗಿ ಸಮಾಲೋಚನೆಗಳನ್ನು ಎಲ್ಲಾ ಜಿಲ್ಲೆ ಮತ್ತು

ತಾಲ್ಲೂಕುಗಳಲ್ಲಿ ನಡೆಸಲಾಗುವುದು. "kaushalkar.com" ವೆಬ್ ಪೋರ್ಟಲ್‌ನಲ್ಲಿರುವ ಮಾಹಿತಿಯೊಂದಿಗೆ ಕೆಲವೊಂದು ಹೆಚ್ಚುವರಿ ಮಾಹಿತಿಯನ್ನು ಸೆರೆ ಹಿಡಿಯಲಾಗುವುದು. ಒಟ್ಟು 7.50 ಲಕ್ಷ ಯುವಜನತೆಗೆ ಈ ವ್ಯವಸ್ಥೆಯಲ್ಲಿ ಅಳವಡಿಸಲಾಗುವುದು.

**ಮುಖಾಮುಖಿ ಸಮಾಲೋಚನೆ:**

ಅಭ್ಯರ್ಥಿಗಳ ಆಸಕ್ತಿ, ಸಾಮರ್ಥ್ಯಗಳನ್ನು ಹಾಗೂ ಇವರನ್ನು ಇರಿಸಹುದಾದ ಸಂಭಾವ್ಯ ಕ್ಷೇತ್ರಗಳನ್ನು ತಿಳಿದುಕೊಳ್ಳಲು ದೂರವಾಣಿ ಸಮಾಲೋಚನೆ ನಡೆಸಲಾದ ಎಲ್ಲಾ ಅಭ್ಯರ್ಥಿಗಳಿಗೆ ಕೌಶಲ್ಯ ಮೌಲ್ಯಮಾಪನ ಹಾಗೂ ಮುಖಾಮುಖಿ ಸಮಾಲೋಚನೆಗೊಳಪಡಿಸಲಾಗುವುದು.

ಸಮಾಲೋಚನೆಯ ನಂತರ ಅಭ್ಯರ್ಥಿಗಳಿಗೆ ನೇರವಾಗಿ ಸಂಪರ್ಕ ಕಲ್ಪಿಸುವುದರ ಮೂಲಕ ಖಾಸಗಿ ವಲಯದ ಉದ್ಯೋಗದಾತರೊಂದಿಗೆ ಮತ್ತು ನೊಂದಾಯಿತ ತರಬೇತುದಾರರೊಂದಿಗೆ ಕೌಶಲ್ಯ ತರಬೇತಿ ಹೊಂದಿ ಉದ್ಯೋಗ ನಿಯುಕ್ತಿ ಪಡೆಯಲು ಅಥವಾ ಶಿಶಿಕ್ಷು ತರಬೇತಿ ಪಡೆಯಲು ಸಹಾಯ ನೀಡಲಾಗುವುದು.

ಅಭ್ಯರ್ಥಿಗಳಿಗೆ ಉದ್ಯೋಗದ ಮೂಲಕ ಹೊಂದಬಹುದಾದ ವಿವಿಧ ಅವಕಾಶಗಳು ಮತ್ತು ಭವಿಷ್ಯದ ಮಾರ್ಗಗಳನ್ನು ಅರ್ಥಮಾಡಿಕೊಳ್ಳಲು ಈ ವೈಯಕ್ತಿಕ ಅಧಿವೇಶನದ (ದೂರವಾಣಿ ಮತ್ತು ಮುಖಾಮುಖಿ) ಉದ್ದೇಶವಾಗಿದೆ. ಇದರಿಂದ ಅವನು/ಅವಳು ಕೌಶಲ್ಯೀಕರಣ, ಮರು ಕೌಶಲ್ಯೀಕರಣದಿಂದ (ಅಂತರವನ್ನು ಸರಿದೂಗಿಸಲು) ವಿವಿಧ ಮಟ್ಟದಲ್ಲಿರುವ ಉದ್ಯೋಗಾವಕಾಶಗಳನ್ನು ತಿಳಿದುಕೊಳ್ಳಲು ಸಹಾಯವಾಗುವುದು.

ತಾಲ್ಲೂಕು ಮಟ್ಟದ ಕೌನ್ಸೆಲಿಂಗ್‌ಗಳನ್ನು ಹೊರತುಪಡಿಸಿ ರಾಜ್ಯ ಉದ್ಯೋಗ ವಿನಿಮಯ ಕಛೇರಿಗಳನ್ನು ಸಹ ಸಮಾಲೋಚನೆಗಳಿಗೆ ಉಪಯೋಗಿಸಲಾಗುವುದು. ಇದರಿಂದ ದೊಡ್ಡ ಪ್ರಮಾಣದಲ್ಲಿ ಅಭ್ಯರ್ಥಿಗಳಿಗೆ ಸಲಹೆ ನೀಡಿ ಹೆಚ್ಚಿನ ಮಟ್ಟದಲ್ಲಿ ಪರಿಹಾರ ಪಡೆಯಲು ಸಾಧ್ಯವಾಗುವುದು. ಈ ಕಲ್ಪನೆಯು ವೈಯಕ್ತಿಕವಾಗಿ ಡಿಜಿಟಲ್ ಮಾಧ್ಯಮಗಳಿಗೆ ಪ್ರವೇಶವಿಲ್ಲದವರಿಗೆ ಅಂತರ್ಗತ ಮತ್ತು ಹೆಚ್ಚಿನ ವ್ಯಾಪ್ತಿಯನ್ನು ಖಚಿತಪಡಿಸುವುದು.

**ಈ ಕಾರ್ಯದಿಂದ ಕೆಳಗೆ ನಮೂದಿಸಿರುವ ಫಲಶೃತಿಗಳನ್ನು ಪಡೆಯಬಹುದು.**

1. ಒಟ್ಟು 7.50 ಲಕ್ಷ ಅಭ್ಯರ್ಥಿಗಳಿಗೆ ಟೆಲಿ ಕೌನ್ಸಿಲಿಂಗ್
2. 5.50 ಲಕ್ಷ ಅಭ್ಯರ್ಥಿಗಳಿಗೆ ಮುಖಾಮುಖಿ ಸಮಾಲೋಚನೆ
3. 5.50 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ಮೌಲ್ಯಮಾಪನ ಪ್ರಮಾಣಪತ್ರಗಳನ್ನು ನೀಡಲಾಗುವುದು.
4. 2.50 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ಕಾರ್ಡ್ (ಕ್ಯೂ.ಆರ್.ಕೋಡ್)ಗಳನ್ನು ನೀಡಲಾಗುವುದು.
5. 2.50 ಲಕ್ಷ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಜೋಡಣೆಗೆ (ನೇರ ಉದ್ಯೋಗ ನಿಯುಕ್ತಿ ಶಿಶಿಕ್ಷು ಹಾಗೂ ಕೌಶಲ್ಯ ತರಬೇತಿ)ಉಲ್ಲೇಖಿಸುವುದು.
6. 1.00 ಲಕ್ಷ ಅಭ್ಯರ್ಥಿಗಳಿಗೆ ಸ್ವಯಂ ಸೇವಾ ಅವಕಾಶ.

**ಬಿ) ಉದ್ಯೋಗದಾತರ ಒಡಂಬಡಿಕೆ:**

ಈ ಹಸ್ತಕ್ಷೇಪದ ತಂಡದ ಪ್ರಾಥಮಿಕ ಪಾತ್ರವು ಕೌಶಲ್ಯ ಪರಿಸರ ವ್ಯವಸ್ಥೆಯಲ್ಲಿನ ಎಲ್ಲಾ ಮಧ್ಯಸ್ಥಗಾರರಿಂದ ಕೌಶಲ್ಯ ಆಧಾರಿತ ಒಳನೋಟಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಎಲೆಕ್ಟ್ರಾನಿಕ್ ವೇದಿಕೆಯಲ್ಲಿ ಸೇರಿಸಿಕೊಳ್ಳುವುದು. ಈ ಘಟಕವು ಉದ್ಯೋಗ ಜಾಬ್‌ರೋಲ್ಸ್ ಗಳನ್ನು ಸಂಗ್ರಹಿಸಿ ನಿಜವಾದ ಮಾರುಕಟ್ಟೆಯ ಅವಶ್ಯಕತೆಗಳ ಆಧಾರದ ಮೇಲೆ ಮೌಲ್ಯಮಾಪನ ನಿಯತಾಂಕಗಳನ್ನು ನಿರ್ಮಿಸುವುದು ಮತ್ತು ಬುದ್ದಿವಂತಿಕೆಯಿಂದ ಸರಿಜೋಡಿಸುವ ಒಳನೋಟಗಳನ್ನು ಅಭಿವೃದ್ಧಿ ಪಡಿಸುವುದು.

ಈ ಹಸ್ತಕ್ಷೇಪ ಘಟಕವು ಬೇಡಿಕೆ ಬದಿಯಲ್ಲಿ ಕೆಲಸ ಮಾಡುತ್ತದೆ ಮತ್ತು ಕರ್ನಾಟಕದಲ್ಲಿ ಲಭ್ಯವಿರುವ ಉದ್ಯೋಗಗಳನ್ನು ನಿಭಾಯಿಸಲು ಉದ್ಯೋಗದಾತರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಉದ್ಯೋಗದಾತ ಹಾಗೂ ಅಭ್ಯರ್ಥಿ ನಡುವೆ ಸಂಬಂಧಿತ ನೈಜ-ಸಮಯ ಮತ್ತು ಹೊಂದಾಣಿಕೆಯನ್ನು ಮಾಡುವುದನ್ನು ಸುಲಭವಾಗಿಸುತ್ತದೆ. ಈ ಹಸ್ತಕ್ಷೇಪ ಕಾರ್ಯಕ್ರಮಕ್ಕೆ ಸಮಾಲೋಚನೆ ಮತ್ತು ತರಬೇತಿಯ ನಂತರ ಶಿಶಿಕ್ಷು ಮತ್ತು ನೊಂದಾಯಿತ ಯುವಕರ ಉದ್ಯೋಗನಿಯುಕ್ತಿ ನೇರವಾಗಿ ಕಾರಣವಾಗುತ್ತದೆ. ಮಾರುಕಟ್ಟೆಯ ಮೇಲಿರುವ ಪಾಲುದಾರರು ಈ ಕೆಳಗಿನಂತಿವೆ.

1. ನೊಂದಾಯಿತ ಯುವಜನತೆ
2. ಉದ್ಯೋಗದಾತರು (ದೊಡ್ಡ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಹೈಪರ್‌ಲೋಕಲ್)
3. ಕ್ಷೇತ್ರ ಮತ್ತು ವಾಸ್ತವ ತರಬೇತುದಾರರು.

ಸಿ) <u>**ಉದ್ಯೋಗ ಶಿಶಿಕ್ಷು ಮತ್ತು ಕೌಶಲ್ಯ/ಮರುಕೌಶಲ್ಯೀಕರಣ ಮಾರುಕಟ್ಟೆ ಸ್ಥಳ**</u>

I Got Solution ವೇದಿಕೆಯಿಂದ ಅಭ್ಯರ್ಥಿಗಳು, ಉದ್ಯೋಗದಾತರು, ತರಬೇತುದಾರರು ಮತ್ತು ಇತರ ಸಂಸ್ಥೆಗಳ ನಡುವೆ ಬುದ್ಧಿವಂತಿಕೆಯಿಂದ ಶಿಶಿಕ್ಷು ತರಬೇತಿ, ಉದ್ಯೋಗ, ಕೌಶಲ್ಯ/ಮರುಕೌಶಲ್ಯೀಕರಣ ಅವಕಾಶಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಇವೆಲ್ಲವುಗಳನ್ನು ಮಾರ್ಕೆಟ್ ಲಿಂಕೇಜ್ ಘಟಕದ ಮೂಲಕ ಅವಕಾಶಗಳ ಮಾರುಕಟ್ಟೆ ಸ್ಥಳವಾಗಿ ಮಾರ್ಪಡಿಸಲು ಡಿಜಿಟಲ್ ವೇದಿಕೆಯಲ್ಲಿ ಎಲ್ಲವನ್ನು ಸಂಯೋಜಿಸಲಾಗಿದೆ.

2017-18ನೇ ಸಾಲಿನ ಆಯವ್ಯಯದಲ್ಲಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ 200 ಕೋಟಿ ರೂಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಸದರಿ ಯೋಜನೆಯನ್ನು 9.88 ಕೋಟಿ ರೂಗಳ ಮೊತ್ತದಲ್ಲಿ ಮಿಷನ್ ಮಾಧರಿ ಆಧಾರದ **ಮೇಲೆ** ಕೆಟಿಪಿಪಿ ಅಧಿನಿಯಮ 4(ಜಿ)ಯಡಿ ವಿನಾಯಿತಿ ಪಡೆದು ಅನುಷ್ಠಾನಗೊಳಿಸಲು ಅನುಮೋದನೆ **ಕೋರಿದೆ.**

ಮೈಂಡ್‌ಟ್ರೀ ಸಂಸ್ಥೆಯ ವಿವರವಾದ ಪ್ರಸ್ತಾವನೆಯು ***ಅನುಬಂಧ-1 ರಲ್ಲಿ*** ನೀಡಲಾಗಿದೆ. ಬೆಲೆ/ವೆಚ್ಚದ ಪ್ರಧಾನ ಶೀರ್ಷಿಕೆವಾರು ವಿವರ ಕೆಳಕಂಡಂತಿದೆ.

| ಐಟಂ ವಿವರ | ಬೆಲೆ (ಕೋಟಿ ರೂ.ಗಳಲ್ಲಿ) |
|---|---|
| ತಂತ್ರಜ್ಞಾನ ವೇದಿಕೆ | 0 |
| ಟೆಲಿ ಕೌನ್ಸಿಲರ್ಸ್ ತರಬೇತಿ ಮತ್ತು ಕೌನ್ಸಿಲರ್ಸ್ ತರಬೇತುದಾರರಿಗೆ ಮಾಸ್ಟರ್ ತರಬೇತಿ (ಟಿಓಟಿ) (ಪ್ರವಾಸ ಮತ್ತು ವೆಚ್ಚಗಳು) | 0.30 |
| ಟೆಲಿ ಕೌನ್ಸಿಲಿಂಗ್ ಮತ್ತು ಎಸ್.ಎಂ.ಎಸ್. ಕನೆಕ್ಟ್ | 1.67 |
| 320 ಕೌನ್ಸಿಲರ್ಸ್‌ಗಳಿಗೆ ಪ್ರವಾಸ ಭತ್ಯೆ/ತುಟ್ಟಿ ಭತ್ಯೆ | 0.08 |
| ಮುಖಾಮುಖಿ ಕೌನ್ಸಿಲಿಂಗ್ | 2.10 |
| ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಗೆ ದೀರ್ಘಾವಧಿಯಾಗಿ ಕೌನ್ಸಿಲರ್ಸ್‌ಗಳನ್ನು ನಿಯೋಜನೆ | 0.84 |
| ಕೌನ್ಸಿಲರ್ಸ್‌ಗಳ ಮೇಲ್ವಿಚಾರಣ ವೆಚ್ಚ | 0.15 |
| 320 Android Tablets | 0.31 |
| Data SIM + Firewall Software for Tablets | 0.11 |
| Personalised Skill Card with QR code (2.5 lakh cards) | 1.50 |
| ವೈಯಕ್ತಿಕ ಸಮಾಲೋಚನ ದೃಢೀಕರಣ ಪತ್ರ (5.5 ಲಕ್ಷ ಅಭ್ಯರ್ಥಿಗಳಿಗೆ) | 1.10 |
| Employer Onboarding & Match Making (People Cost) | 1.04 |
| Employer Onboarding & Match Making (Travel & Expenses) | 0.38 |
| ಯೋಜನಾ ಸಮನ್ವಯ | 0.21 |
| ಯೋಜನಾ ಸಮನ್ವಯಾಧಿಕಾರಿಯ ಪ್ರವಾಸ ಮತ್ತು ತಂತ್ರ | 0.09 |
| **ಒಟ್ಟು** | **9.88** |

--4

ಮೇಲೆ (3)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಅಧಿಸೂಚನೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಕೌಶಲ ಕರ್ ಡಾಟ್‌ಕಾಮ್‌ನಲ್ಲಿ ನೊಂದಾಯಿಸಿದ ಯುವಕರಿಗೆ ಅವರ ಆಸಕ್ತಿಗನುಗುಣವಾಗಿ ನೇರವಾಗಿ ಉದ್ಯೋಗವನ್ನು ಪಡೆಯಲು ಅಥವಾ ತರಬೇತಿಗಳಿಂದ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ತರಬೇತಿ ಪಡೆಯಲು ಮತ್ತು ಉದ್ದಿಮೆದಾರರಲ್ಲಿ ಉದ್ಯೋಗ ಪಡೆಯಲು ಅಥವಾ ಶಿಶಿಕ್ಷು ತರಬೇತಿಯನ್ನು ಪಡೆಯಲು ಸಮಾಲೋಚನೆ ಯೋಜನೆಯನ್ನು ರೂ. 9.88 ಕೋಟಿಗಳ ವೆಚ್ಚದಲ್ಲಿ ಮೈಂಡ್‌ಟ್ರೀ ಸಂಸ್ಥೆಯಿಂದ ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಿನಾಯಿತಿಯನ್ನು ನೀಡಿದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಕೌಉಜೀಇ 269 ಕೈತಇ 2017 ಬೆಂಗಳೂರು, ದಿನಾಂಕ: 14/08/2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ kaushalkar.com ನಲ್ಲಿ ನೊಂದಾಯಿಸಿದ ಯುವಜನತೆಗೆ ಕೌನ್ಸಿಲಿಂಗ್ ಮತ್ತು ಉದ್ಯೋಗ ಸಂಪರ್ಕ ಹೊಂದಲು ಮೆ. ಮೈಂಡ್‌ಟ್ರೀ ಸಂಸ್ಥೆಯ ಮೂಲಕ UNDP India ಸಹಯೋಗದೊಂದಿಗೆ 9.88 ಕೋಟಿ ರೂ. ಗಳ ಯೋಜನಾ ವೆಚ್ಚ ಭರಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ರ ಕಲಂ 4(ಜಿ)ಯಡಿ ಆರ್ಥಿಕ ಇಲಾಖೆಯಿಂದ ವಿನಾಯಿತಿ ಪಡೆದಿದ್ದು ಅನುಬಂಧದಲ್ಲಿ ಸೂಚಿಸಿರುವಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ನಿಗಧಿತ ಅವಧಿಯಲ್ಲಿಯೇ ಜಾರಿಗೆ ತರಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಆದೇಶಿಸಿದೆ. ಸದರಿ ವೆಚ್ಚವನ್ನು ಕರ್ನಾಟಕ ಕೌಶಲ್ಯಾಭಿವೃದ್ಧಿ ಮಿಷನ್ ಲೆಕ್ಕ ಶೀರ್ಷಿಕೆ 2230-02-101-0-9 ರಡಿ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಯೋಇ 161 ಜಶಉ 2017 ದಿನಾಂಕ: 13/07/2017 ಮತ್ತು ಆರ್ಥಿಕ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಆಇ 774 ವೆಚ್ಚ-12/2017 ದಿನಾಂಕ: 14/07/2017 ರಲ್ಲಿ ನೀಡಿರುವ ಸಹಮತಿ ಹಾಗೂ ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ.543/2017, ದಿನಾಂಕ: 07.08.2017 ರಂದು ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

14/8/17

(ಶಿವಲಿಂಗ)
ಸರ್ಕಾರದ ಉಪ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

14/8/17

ಇವರಿಗೆ:

1) ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು-29.
3) ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) Mindtree Limited, Global Village, RVCE Post, Mysore Road, Bengaluru-560059.
5) United Nations Development Programme, One United Nations Plaza, New York, NY 10017 USA.
6) ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.

7) ಖಜಾನಾಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
8) ಉಪನಿರ್ದೇಶಕರು, ಖಜಾನೆ ಎನ್.ಎಂ.ಸಿ., ಖನಿಜಭವನ, ರೇಸ್‌ಕೋರ್ಸ್‌ರೋಡ್, ಬೆಂಗಳೂರು.
9) ಸರ್ಕಾರದ ಅಧೀನಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
11) ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನಸೌಧ, ಇವರಿಗೆ ಪ್ರಕರಣ ಸಂಖ್ಯೆ: ಸಿ.543/2017.
12) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ

ಮೈಂಡ್‌ಟ್ರೀ, ಸಂಸ್ಥೆಯು, UNDP India ಸಹಯೋಗದೊಂದಿಗೆ ಮಧ್ಯಸ್ಥಿಕೆ ವಹಿಸಿ ಈ ಕೆಳಕಂಡ ವಿಷಯಗಳೊನ್ನೊಳಗೊಂಡ ಅಂಶಗಳನ್ನು ರಚಿಸಿ ಪ್ರಸ್ತಾಪಿಸಿರುತ್ತದೆ.

ಎ) **ಅಭ್ಯರ್ಥಿಗಳೊಂದಿಗೆ ಸಮಾಲೋಚನೆ ಮತ್ತು ವೈಯಕ್ತಿಕ ಒಡಂಬಡಿಕೆ**

**ದೂರವಾಣಿ ಸಮಾಲೋಚನೆ:**

ನೊಂದಣಿಯಾದ ಎಲ್ಲಾ ಅಭ್ಯರ್ಥಿಗಳೊಂದಿಗೆ ರಚಿಸಲಾದ ಪ್ರಶ್ನಾವಳಿಯನ್ವಯ ದೂರವಾಣಿ ಮೂಲಕ ಸಮಾಲೋಚನೆ ನಡೆಸಿ ಹಾಗೂ ಮುಖಾ ಮುಖಿಯಾಗಿ ಸಮಾಲೋಚನೆಗಳನ್ನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ನಡೆಸಲಾಗುವುದು. "kaushalkar.com" ವೆಬ್ ಪೋರ್ಟಲ್‌ನಲ್ಲಿರುವ ಮಾಹಿತಿಯೊಂದಿಗೆ ಕೆಲವೊಂದು ಹೆಚ್ಚುವರಿ ಮಾಹಿತಿಯನ್ನು ಸೆರೆ ಹಿಡಿಯಲಾಗುವುದು. ಒಟ್ಟು 7.50 ಲಕ್ಷ ಯುವಜನತೆಗೆ ಈ ವ್ಯವಸ್ಥೆಯಲ್ಲಿ ಅಳವಡಿಸಲಾಗುವುದು.

**ಮುಖಾಮುಖಿ ಸಮಾಲೋಚನೆ:**

ಆಭ್ಯರ್ಥಿಗಳ ಆಸಕ್ತಿ, ಸಾಮರ್ಥ್ಯಗಳನ್ನು ಹಾಗೂ ಇವರನ್ನು ಇರಿಸಹುದಾದ ಸಂಭಾವ್ಯ ಕ್ಷೇತ್ರಗಳನ್ನು ತಿಳಿದುಕೊಳ್ಳಲು ದೂರವಾಣಿ ಸಮಾಲೋಚನೆ ನಡೆಸಲಾದ ಎಲ್ಲಾ ಅಭ್ಯರ್ಥಿಗಳಿಗೆ ಕೌಶಲ್ಯ ಮೌಲ್ಯಮಾಪನ ಹಾಗೂ ಮುಖಾಮುಖಿ ಸಮಾಲೋಚನೆಗೊಳಪಡಿಸಲಾಗುವುದು.

ಸಮಾಲೋಚನೆಯ ನಂತರ ಅಭ್ಯರ್ಥಿಗಳಿಗೆ ನೇರವಾಗಿ ಸಂಪರ್ಕ ಕಲ್ಪಿಸುವುದರ ಮೂಲಕ ಖಾಸಗಿ ವಲಯದ ಉದ್ಯೋಗದಾತರೊಂದಿಗೆ ಮತ್ತು ನೊಂದಾಯಿತ ತರಬೇತುದಾರರೊಂದಿಗೆ ಕೌಶಲ್ಯ ತರಬೇತಿ ಹೊಂದಿ ಉದ್ಯೋಗ ನಿಯುಕ್ತಿ ಪಡೆಯಲು ಅಥವಾ ಶಿಶಿಕ್ಷು ತರಬೇತಿ ಪಡೆಯಲು ಸಹಾಯ ನೀಡಲಾಗುವುದು.

ಅಭ್ಯರ್ಥಿಗಳಿಗೆ ಉದ್ಯೋಗದ ಮೂಲಕ ಹೊಂದಬಹುದಾದ ವಿವಿಧ ಅವಕಾಶಗಳು ಮತ್ತು ಭವಿಷ್ಯದ ಮಾರ್ಗಗಳನ್ನು ಅರ್ಥಮಾಡಿಕೊಳ್ಳಲು ಈ ವೈಯಕ್ತಿಕ ಅಧಿವೇಶನದ (ದೂರವಾಣಿ ಮತ್ತು ಮುಖಾಮುಖಿ) ಉದ್ದೇಶವಾಗಿದೆ. ಇದರಿಂದ ಅವನು/ಅವಳು ಕೌಶಲ್ಯೀಕರಣ, ಮರು ಕೌಶಲ್ಯೀಕರಣದಿಂದ (ಅಂತರವನ್ನು ಸರಿದೂಗಿಸಲು) ವಿವಿಧ ಮಟ್ಟದಲ್ಲಿರುವ ಉದ್ಯೋಗಾವಕಾಶಗಳನ್ನು ತಿಳಿದುಕೊಳ್ಳಲು ಸಹಾಯವಾಗುವುದು.

ತಾಲ್ಲೂಕು ಮಟ್ಟದ ಕೌನ್ಸೆಲಿಂಗ್‌ಗಳನ್ನು ಹೊರತುಪಡಿಸಿ ರಾಜ್ಯ ಉದ್ಯೋಗ ವಿನಿಮಯ ಕಛೇರಿಗಳನ್ನು ಸಹ ಸಮಾಲೋಚನೆಗಳಿಗೆ ಉಪಯೋಗಿಸಲಾಗುವುದು. ಇದರಿಂದ ದೊಡ್ಡ ಪ್ರಮಾಣದಲ್ಲಿ ಅಭ್ಯರ್ಥಿಗಳಿಗೆ ಸಲಹೆ ನೀಡಿ ಹೆಚ್ಚಿನ ಮಟ್ಟದಲ್ಲಿ ಪರಿಹಾರ ಪಡೆಯಲು ಸಾಧ್ಯವಾಗುವುದು. ಈ ಕಲ್ಪನೆಯು ವೈಯಕ್ತಿಕವಾಗಿ ಡಿಜಿಟಲ್ ಮಾಧ್ಯಮಗಳಿಗೆ ಪ್ರವೇಶವಿಲ್ಲದವರಿಗೆ ಅಂತರ್ಗತ ಮತ್ತು ಹೆಚ್ಚಿನ ವ್ಯಾಪ್ತಿಯನ್ನು ಖಚಿತಪಡಿಸುವುದು.

**ಈ ಕಾರ್ಯದಿಂದ ಕೆಳಗೆ ನಮೂದಿಸಿರುವ ಫಲಶೃತಿಗಳನ್ನು ಪಡೆಯಬಹುದು.**

1. ಒಟ್ಟು 7.50 ಲಕ್ಷ ಅಭ್ಯರ್ಥಿಗಳಿಗೆ ಟೆಲಿ ಕೌನ್ಸಿಲಿಂಗ್
2. 5.50 ಲಕ್ಷ ಅಭ್ಯರ್ಥಿಗಳಿಗೆ ಮುಖಾಮುಖಿ ಸಮಾಲೋಚನೆ
3. 5.50 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ಮೌಲ್ಯಮಾಪನ ಪ್ರಮಾಣಪತ್ರಗಳನ್ನು ನೀಡಲಾಗುವುದು.

4. 2.50 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ಕಾರ್ಡ್ (ಕ್ಯೂ.ಆರ್.ಕೋಡ್)ಗಳನ್ನು ನೀಡಲಾಗುವುದು.
5. 2.50 ಲಕ್ಷ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಜೋಡಣೆಗೆ (ನೇರ ಉದ್ಯೋಗ ನಿಯುಕ್ತಿ ಶಿಶಿಕ್ಷು ಹಾಗೂ ಕೌಶಲ್ಯ ತರಬೇತಿ)ಉಲ್ಲೇಖಿಸುವುದು.
6. 1.00 ಲಕ್ಷ ಅಭ್ಯರ್ಥಿಗಳಿಗೆ ಸ್ವಯಂ ಸೇವಾ ಅವಕಾಶ.

ಬಿ) **ಉದ್ಯೋಗದಾತರ ಒಡಂಬಡಿಕೆ:**

ಈ ಹಸ್ತಕ್ಷೇಪದ ತಂಡದ ಪ್ರಾಥಮಿಕ ಪಾತ್ರವು ಕೌಶಲ್ಯ ಪರಿಸರ ವ್ಯವಸ್ಥೆಯಲ್ಲಿನ ಎಲ್ಲಾ ಮಧ್ಯಸ್ಥಗಾರರಿಂದ ಕೌಶಲ್ಯ ಆಧಾರಿತ ಒಳನೋಟಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಎಲೆಕ್ಟ್ರಾನಿಕ್ ವೇದಿಕೆಯಲ್ಲಿ ಸೇರಿಸಿಕೊಳ್ಳುವುದು. ಈ ಘಟಕವು ಉದ್ಯೋಗ ಜಾಬ್‌ರೋಲ್ಸ್ ಗಳನ್ನು ಸಂಗ್ರಹಿಸಿ ನಿಜವಾದ ಮಾರುಕಟ್ಟೆಯ ಅವಶ್ಯಕತೆಗಳ ಆಧಾರದ ಮೇಲೆ ಮೌಲ್ಯಮಾಪನ ನಿಯತಾಂಕಗಳನ್ನು ನಿರ್ಮಿಸುವುದು ಮತ್ತು ಬುದ್ಧಿವಂತಿಕೆಯಿಂದ ಸರಿಜೋಡಿಸುವ ಒಳನೋಟಗಳನ್ನು ಅಭಿವೃದ್ಧಿ ಪಡಿಸುವುದು.

ಈ ಹಸ್ತಕ್ಷೇಪ ಘಟಕವು ಬೇಡಿಕೆ ಬದಿಯಲ್ಲಿ ಕೆಲಸ ಮಾಡುತ್ತದೆ ಮತ್ತು ಕರ್ನಾಟಕದಲ್ಲಿ ಲಭ್ಯವಿರುವ ಉದ್ಯೋಗಗಳನ್ನು ನಿಭಾಯಿಸಲು ಉದ್ಯೋಗದಾತರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಉದ್ಯೋಗದಾತ ಹಾಗೂ ಅಭ್ಯರ್ಥಿ ನಡುವೆ ಸಂಬಂಧಿತ ನೈಜ-ಸಮಯ ಮತ್ತು ಹೊಂದಾಣಿಕೆಯನ್ನು ಮಾಡುವುದನ್ನು ಸುಲಭವಾಗಿಸುತ್ತದೆ. ಈ ಹಸ್ತಕ್ಷೇಪ ಕಾರ್ಯಕ್ರಮಕ್ಕೆ ಸಮಾಲೋಚನೆ ಮತ್ತು ತರಬೇತಿಯ ನಂತರ ಶಿಶಿಕ್ಷು ಮತ್ತು ನೊಂದಾಯಿತ ಯುವಕರ ಉದ್ಯೋಗನಿಯುಕ್ತಿ ನೇರವಾಗಿ ಕಾರಣವಾಗುತ್ತದೆ. ಮಾರುಕಟ್ಟೆಯ ಮೇಲಿರುವ ಪಾಲುದಾರರು ಈ ಕೆಳಗಿನಂತ್ತಿವೆ.

4. ನೊಂದಾಯಿತ ಯುವಜನತೆ
5. ಉದ್ಯೋಗದಾತರು (ದೊಡ್ಡ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಹೈಪರ್ಲೋಕಲ್)
6. ಕ್ಷೇತ್ರ ಮತ್ತು ವಾಸ್ತವ ತರಬೇತುದಾರರು.

ಸಿ) **ಉದ್ಯೋಗ ಶಿಶಿಕ್ಷು ಮತ್ತು ಕೌಶಲ್ಯ/ಮರುಕೌಶಲ್ಯೀಕರಣ ಮಾರುಕಟ್ಟೆ ಸ್ಥಳ**

I Got Solution ವೇದಿಕೆಯಿಂದ ಅಭ್ಯರ್ಥಿಗಳು, ಉದ್ಯೋಗದಾತರು, ತರಬೇತುದಾರರು ಮತ್ತು ಇತರ ಸಂಸ್ಥೆಗಳ ನಡುವೆ ಬುದ್ಧಿವಂತೆಕೆಯಿಂದ ಶಿಶಿಕ್ಷು ತರಬೇತಿ, ಉದ್ಯೋಗ, ಕೌಶಲ್ಯ/ಮರುಕೌಶಲ್ಯೀಕರಣ ಅವಕಾಶಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಇವೆಲ್ಲವುಗಳನ್ನು ಮಾರ್ಕೆಟ್ ಲಿಂಕೇಜ್ ಘಟಕದ ಮೂಲಕ ಅವಕಾಶಗಳ ಮಾರುಕಟ್ಟೆ ಸ್ಥಳವಾಗಿ ಮಾರ್ಪಡಿಸಲು ಡಿಜಿಟಲ್ ವೇದಿಕೆಯಲ್ಲಿ ಎಲ್ಲವನ್ನು ಸಂಯೋಜಿಸಲಾಗಿದೆ.

2017–18ನೇ ಸಾಲಿನ ಆಯವ್ಯಯದಲ್ಲಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ 200 ಕೋಟಿ ರೂಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಸದರಿ ಯೋಜನೆಯನ್ನು 9.88 ಕೋಟಿ ರೂಗಳ ಮೊತ್ತದಲ್ಲಿ ಮಿಷನ್ ಮಾಧರಿ ಆಧಾರದ ಮೇಲೆ ಕೆಟಿಪಿಪಿ ಅಧಿನಿಯಮ 4(ಜಿ)ಯಡಿ ವಿನಾಯಿತಿ ಪಡೆದು ಅನುಷ್ಠಾನಗೊಳಿಸಲು ಅನುಮೋದನೆ ಕೋರಿದೆ.

ಮೈಂಡ್‌ಟ್ರೀ ಸಂಸ್ಥೆಯ ವಿವರವಾದ ಪ್ರಸ್ತಾವನೆಯು ***ಅನುಬಂಧ–1*** ರಲ್ಲಿ ನೀಡಲಾಗಿದೆ. ಬೆಲೆ/ವೆಚ್ಚದ ಪ್ರಧಾನ ಶೀರ್ಷಿಕೆವಾರು ವಿವರ ಕೆಳಕಂಡಂತಿದೆ.

| ಐಟಂ ವಿವರ | ಬೆಲೆ (ಕೋಟಿ ರೂ.ಗಳಲ್ಲಿ) |
|---|---|
| ತಂತ್ರಜ್ಞಾನ ವೇದಿಕೆ | 0 |
| ಟೆಲಿ ಕೌನ್ಸಿಲರ್ಸ್ ತರಬೇತಿ ಮತ್ತು ಕೌನ್ಸಿಲರ್ಸ್ ತರಬೇತುದಾರರಿಗೆ ಮಾಸ್ಟರ್ ತರಬೇತಿ (ಟಿಓಟಿ) (ಪ್ರವಾಸ ಮತ್ತು ವೆಚ್ಚಗಳು) | 0.30 |
| ಟೆಲಿ ಕೌನ್ಸಿಲಿಂಗ್ ಮತ್ತು ಎಸ್.ಎಂ.ಎಸ್. ಕನೆಕ್ಟ್ | 1.67 |
| 320 ಕೌನ್ಸಿಲರ್ಸ್‌ಗಳಿಗೆ ಪ್ರವಾಸ ಭತ್ಯೆ/ತುಟ್ಟಿ ಭತ್ಯೆ | 0.08 |
| ಮುಖಾಮುಖಿ ಕೌನ್ಸಿಲಿಂಗ್ | 2.10 |
| ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಗೆ ದೀರ್ಘಾವಧಿಯಾಗಿ ಕೌನ್ಸಿಲರ್ಸ್‌ಗಳನ್ನು ನಿಯೋಜನೆ | 0.84 |
| ಕೌನ್ಸಿಲರ್ಸ್‌ಗಳ ಮೇಲ್ವಿಚಾರಣ ವೆಚ್ಚ | 0.15 |
| 320 Android Tablets | 0.31 |
| Data SIM + Firewall Software for Tablets | 0.11 |
| Personalised Skill Card with QR code (2.5 lakh cards) | 1.50 |
| ವೈಯಕ್ತಿಕ ಸಮಾಲೋಚನ ದೃಢೀಕರಣ ಪತ್ರ (5.5 ಲಕ್ಷ ಅಭ್ಯರ್ಥಿಗಳಿಗೆ) | 1.10 |
| Employer Onboarding & Match Making (People Cost) | 1.04 |
| Employer Onboarding & Match Making (Travel & Expenses) | 0.38 |
| ಯೋಜನಾ ಸಮನ್ವಯ | 0.21 |
| ಯೋಜನಾ ಸಮನ್ವಯಾಧಿಕಾರಿಯ ಪ್ರವಾಸ ಮತ್ತು ತಂತ್ರ | 0.09 |
| **ಒಟ್ಟು** | **9.88** |

14/8

ಶಿವಲಿಂಗ

ಸರ್ಕಾರದ ಉಪ ಕಾರ್ಯದರ್ಶಿ

ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ